ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **1084(1537)**
ಸದಸ್ಯರ ಹೆಸರು : **ಡಾ: ಅನ್ನದಾನಿ ಕೆ. (ಮಳವಳ್ಳಿ)**
ಉತ್ತರಿಸುವ ಸಚಿವರು : **ಶ್ರೀ ಹೆಚ್.ಡಿ.ಕುಮಾರಸ್ವಾಮಿ (ಮಾನ್ಯ ಮುಖ್ಯಮಂತ್ರಿಗಳು)**

ಅ) ಮಳವಳ್ಳಿ ತಾಲ್ಲೂಕಿನಿಂದ ರಾಮನಗರ – ಚನ್ನಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ಮಾಡುತ್ತಿರುವುದು ನಿಜವಲ್ಲವೆ;

ಹೌದು

ಆ) ಈ ಮಾರ್ಗದ ಮಧ್ಯದಲ್ಲಿ ಬರುವ ಹಲಗೂರು – ಹೊನ್ನಾಪುರ – ಒಳಗೆರೆದೊಡ್ಡಿ – ಬೆನಮನಹಳ್ಳಿ–ನಿಟ್ಟೂರು – ಎನ್.ಹಲಸಹಳ್ಳಿ–ಕುಂತೊರು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಆದೇಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ. (ಇವುಗಳಲ್ಲಿ ಹೊನ್ನಾಪುರ, ಒಳಗೆರೆದೊಡ್ಡಿ ಸೇರಿರುವುದಿಲ್ಲ.)

ಇ) ಹಾಗಿದ್ದಲ್ಲಿ, ಆ ಗ್ರಾಮಗಳಿಗೆ ಕುಡಿಯುವ ನೀರನ್ನು ಇದುವರೆವಿಗೂ ಕೊಡದಿರಲು ಕಾರಣವೇನು?

ರಾಮನಗರ–ಚನ್ನಪಟ್ಟಣ ನೀರು ಸರಬರಾಜು ಯೋಜನೆಯಡಿ ಮಾರ್ಗಮಧ್ಯೆ ಬರುವ ಹಲಗೂರು ಹಾಗೂ ಇತರ 7 ಗ್ರಾಮಗಳಾದ ಹೊನ್ನಾಪುರ, ಬೆನಮನಹಳ್ಳಿ, ನರೀಪುರ, ಕುಂತೂರು, ಬ್ಯಾಡರಹಳ್ಳಿ, ಎನ್ ಹಲಸಹಳ್ಳಿ ಹಾಗೂ ನಿಟ್ಟೂರು ಗ್ರಾಮಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ದಿನಾಂಕ: 25.3.03 ಮತ್ತು 29.3.05 ರಲ್ಲಿ ರೂ.30.00 ಲಕ್ಷಗಳು ಮಾತ್ರ ಬಿಡುಗಡೆಯಾಗಿರುತ್ತದೆ. ಇವುಗಳಲ್ಲಿ ಕೊನ್ನಾಪುರ ಗ್ರಾಮಕ್ಕೆ ರೂ.9.60 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿದೆ. ಹಾಗೂ ಹಲಗೂರು ಗ್ರಾಮಕ್ಕೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸುವ ರೂ.8.30 ಲಕ್ಷಗಳ ಕಾಮಗಾರಿಯನ್ನು ಮಂಡಳಿ ವತಿಯಿಂದ ಕೈಗೊಂಡು ನೀರಿನ ಸೌಕರ್ಯ ಕಲ್ಪಿಸಲಾಗಿದೆ. ಬಿಡುಗಡೆಯಾದ ಹಣದಲ್ಲಿ ರೂ.9.90 ಲಕ್ಷಗಳನ್ನು ಜಿಲ್ಲಾ ಪಂಚಾಯಿತಿ, ಬೆಂಗಳೂರು ಗ್ರಾಮಾಂತರ ಇವರು ಹಿಂದೆ ಪಡೆದಿರುತ್ತಾರೆ. ಇದರಿಂದಾಗಿ ಮಂಡಳಿಯಲ್ಲಿ ಕೇವಲ ರೂ.2.20 ಲಕ್ಷಗಳು ಮಾತ್ರ ಉಳಿದಿರುತ್ತದೆ. ಆದುದರಿಂದ ಉಳಿದ ಕಾಮಗಾರಿಗಳಿಗೆ ನೀರು ಸರಬರಾಜು ಮಾಡಿರುವುದಿಲ್ಲ.